ಆಗಾಗ ನಾನಿದ್ದಲ್ಲಿಗೆ ಬರ್ತಾ ಇದ್ದಳು. ತಂದೆ ಮಗಳು ಮಾತ್ರ ಇದ್ದದ್ದು ಅವರು. ಅವನೂ ಕೆಲಸಕ್ಕೆ ಹೋಗೋನು. ಬಡತನ ಇದ್ದರೂ ಇವಳಲ್ಲಿ ಹೃದಯ ಶ್ರೀಮಂತಿಕೆಯನ್ನು ಗುರುತಿಸಿದೆ. ಕೆಲವೊಮ್ಮೆ ಬಂದು ರೊಟ್ಟಿ ಸಬ್ಜಿ ಮಾಡಿ ಕೊಡೋಳು. ಕಾಸು ಕೊಟ್ಟರೆ ಬೇಡ ಅಂತ ಹಾಗೇ ಹೋಗೋಳು. ಒಮ್ಮೆ ಧೈರ್ಯ ಮಾಡಿ ಕೇಳಿದೆ, ''ನನ್ನೊಂದಿಗೆ ಬರ್ತಿಯಾ?'' ಅಂತ. ಆಕೆಯ ಅಪ್ಪ ಮಗಳನ್ನು ಕಳುಹಿಸಲು ಒಪ್ಪಿದ. ''ನೀನೂ ಬಾ'' ಅಂತ ಕೇಳಿಕೊಂಡರೆ ಸುತಾರಾಂ ಒಪ್ಪಲಿಲ್ಲ. ಬಡತನವಿದ್ದರೂ ಸ್ವಾಭಿಮಾನಕ್ಕೆ ಕೊರತೆಯಿರಲಿಲ್ಲ ಆತನಲ್ಲಿ. ಇವಳನ್ನು ಜೊತೆಯಲ್ಲೇ ಕರೆದುಕೊಂಡು ಬಂದಾಗ ದೀಪಕ್, ''ಅರೇ... ನೀನು?! ಹೀಗೆ ಏಕಾಏಕಿ ಬಂದು ಬಿಡುವುದೇ? ನಿನ್ನ ತಂದೆಗೆ ಗೊತ್ತಾದರೆ ನನ್ನನ್ನು ವಿಚಾರಿಸಿಕೊಂಡಾರು'' ಅಂತ ಇವಳನ್ನೇ ದಬಾಯಿಸಿದ. ಇವನ ಪರಿಚಯದ ಕುಟುಂಬವೇ ಅವರದ್ದು. ನಾನು ನನ್ನ ಮನದ ವಿಚಾರವನ್ನು ಸ್ಪಷ್ಟವಾಗಿ ಹೇಳಿದೆ. ಬೈದುಬಿಟ್ಟ, ''ಹಿಂದು ಮುಂದು ವಿಚಾರಿಸದೆ, ಯಾರು ಏನು ಎಂದು ಗೊತ್ತಿಲ್ಲದೆ ಹೀಗೆ ಕಟ್ಟಿಕೊಂಡು ಬರುವುದೇ?" ಎಂದು ಗದರಿದ. ''ನೀನೇ ಅಂತಿದ್ಯಲ್ಲ, ಒಬ್ಬಳನ್ನು ಕಟ್ಟಿಕೋ ಅಂತ. ಸುಮ್ನಿರು ಈಗ. ನನಗೆ ಇವಳು ಸಾಕು. ಇವಳ ಒಪ್ಪಿಗೆಯಿಲ್ಲದೆ ಕರೆದುಕೊಂಡು ಬರ್ಲಿಲ್ಲ, ಬೇಕಾದರೆ ವಿಚಾರಿಸು ಆಕೆಯನ್ನು'' ಎಂದೆ. ಮೂರು ದಿನ ಮಾತು ಬಿಟ್ಟ. ಮಳಿಗೆಯಲ್ಲಿ ನಾನು ನನ್ನಷ್ಟಕ್ಕೆ ಕೆಲಸ ಮಾಡ್ತಾ ಇದ್ದೆ, ಇವ ಮಾತಿಲ್ಲದೆ ವ್ಯವಹಾರ ನಡೆಸ್ತಾ ಇದ್ದ. ಆಮೇಲೆ ನಿಧಾನವಾಗಿ ಸಮಾಧಾನ ಮಾಡಿಕೊಂಡ. ನನ್ನ ಅಮ್ಮ ಅಭ್ಯಂತರ ಹೇಳಲಿಲ್ಲ. ''ಖರ್ಚು ಜಾಸ್ತಿ, ಸಂಬಳ ಕೊಡು ಅಂತ ನಾನೇನೂ ನಿನ್ನನ್ನು ಪೀಡಿಸಲಾರೆ ಮಿತ್ರ. ಈಗ ಹೇಗೆಯೋ ಹಾಗೆ ನೆಮ್ಮದಿಯಿಂದ ಬದುಕುತ್ತೇನೆ'' ಅಂದೆ. ''ಇನ್ನು ಮುಂದೆ ನಿನ್ನ ತೋಟವನ್ನು ನೋಡಿಕೊಳ್ಳಲು ನಾವಿಬ್ಬರೂ ಹೋಗ್ತೇವೆ, ನಮ್ಮ ಹನಿಮೂನು ಅಲ್ಲಿಯೇ'' ಅಂತ ಕಣ್ಣು ಮಿಟುಕಿಸಿದೆ. ''ಅಬ್ಬಬ್ಬಾ ನೀನೇ... ಇಷ್ಟು ಚಾಲೂ ಹೇಗಾದೆ ಮಾರಾಯ ನೀನು?'' ಅಂತ ಛೇಡಿಸಿದ. ನಕ್ಕು ಸುಮ್ಮನಾದೆ. ದೀಪಕ್ ನನ್ನ ನಿರ್ಧಾರವನ್ನು ಮನ್ನಿಸಿದ ಎಂಬ ನೆಮ್ಮದಿ ಉಂಟಾಗಿತ್ತು. ''ನಾನೊಬ್ಬ ಮನುಷ್ಯನಾದ ದಿನ ಅದು'' ಅಂತ ಮೂರ್ತಿ ಸಾಬ್‌ಗೆ ನನ್ನೆಲ್ಲ ವಿಚಾರವನ್ನು ವಿವರಿಸುತ್ತಿದ್ದೆ. ಮಧ್ಯಾಹ್ನದ ಬಿಸಿಲ ಝಳ ಕಳೆದು ಮುಸ್ಸಂಜೆಯ ತಂಪು ನಿಧಾನವಾಗಿ ಆವರಿಸುತ್ತಿದ್ದುದು ನಮ್ಮ ಗಮನಕ್ಕೆ ಬರಲಿಲ್ಲ.

''ಏನೋ ಮಾರಾಯ, ಮೆಹಮಾನ್‌ಗೆ ಬರಿಯ ಮಾತಿನಲ್ಲೇ ಉಪಚಾರ ಮಾಡ್ತಿಯಾ ಹೇಗೆ? ಪಾರ್ಟಿ ಗೀರ್ಟಿ ಕೊಡಿಸುವುದಿಲ್ವಾ?'' ಎನ್ನುತ್ತಾ ಬಳಿಗೆ ಬಂದ ದೀಪಕ್‌ಗೆ, ''ಅದೆಲ್ಲಾ ನೀನೇ ನೋಡಿಕೋ'' ಅಂದೆ. ಇವನನ್ನು ಏನೆಂದು ಕರೆಯಲಿ ನಾನು, ಗೆಳೆಯ ಅನ್ನಲೇ, ಅಣ್ಣ ಅಂತ ತಿಳಿದುಕೊಳ್ಳಲೇ, ಗುರುವೇ, ಅನ್ನದಾತನೇ? ಅದೇ ಸಲುಗೆ, ಅದೇ ಪ್ರೀತಿ ಈಗಲೂ ಇಟ್ಟುಕೊಂಡಿದ್ದಾನೆ. ನಾನು ಕೂಡ.

## ಕುಮಾರಸ್ವಾಮಿ ತೆಕ್ಕುಂಜ

ಹಾಸನದ ಮಲೆನಾಡು ತಾಂತ್ರಿಕ ವಿದ್ಯಾಲಯದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವೀಧರ. ಮುಂಬಯಿಯ ಫಿಯಟ್ ಆಟೊಮೊಬೈಲ್ಸ್ ಕಂಪನಿ, ನಾಸಿಕ್‌ನ ಮಹೀಂದ್ರ ಮಹೀಂದ್ರ ಕಂಪನಿ ಹಾಗೂ ಬೆಂಗಳೂರಿನ ಜನರಲ್ ಮೋಟಾರ್ಸ್‌ನ ಟೆಕ್ನಿಕಲ್ ಸೆಂಟರಿನಲ್ಲಿ ಕೆಲಸ ಮಾಡಿ, ಪ್ರಸ್ತುತ ದಕ್ಷಿಣ ಕನ್ನಡದ ಸುಳ್ಯ ಸಮೀಪದ ಅರಂಬೂರಿನಲ್ಲಿ ನೆಲೆಸಿದ್ದಾರೆ.

'ಮಂಡೋದರಿ', 'ಆಶ್ರಯ' (ಕಾದಂಬರಿಗಳು), 'ಪಾರುಪತಿಯ ಪಾರುಪತ್ಯ' (ಲಲಿತ ಪ್ರಬಂಧಗಳು) – ಇವು ಅವರ ಕೆಲವು ಪ್ರಕಟಿತ ಕೃತಿಗಳಾಗಿವೆ.